# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : 939 |
| ಸದಸ್ಯರ ಹೆಸರು | : ಶ್ರೀ ಮುನಿರಾಜು ಗೌಡ ಪಿ.ಎಂ.<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : 21.09.2022. |
| ಉತ್ತರಿಸುವ ಸಚಿವರು | : ಕಂದಾಯ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರು ನಗರ ಜಿಲ್ಲೆ, ದಕ್ಷಿಣ ತಾಲ್ಲೂಕು, ತಾವರೆಕೆರೆ ಹೋಬಳಿ, ದೊಡ್ಡೇರಿ ಗ್ರಾಮದ ಸರ್ವೆ ನಂ.130ರಲ್ಲಿ ಎಷ್ಟು ಜನತೆಗೆ ಭೂ ಮಂಜೂರು ಮಾಡಲಾಗಿದೆ; (ಮಂಜೂರಾತಿಯ ಪಟ್ಟಿ ನೀಡುವುದು) | ಬೆಂಗಳೂರು ದಕ್ಷಿಣ ತಾಲ್ಲೂಕು, ತಾವರೆಕರೆ ಹೋಬಳಿ, ದೊಡ್ಡೇರಿ ಗ್ರಾಮದ ಸ.ನಂ.130ಕ್ಕೆ ಸಂಬಂಧಿಸಿದಂತೆ ತಹಶೀಲ್ದಾರ್, ಬೆಂಗಳೂರು ದಕ್ಷಿಣ ತಾಲ್ಲೂಕು ಇವರ ಅಧಿಕೃತ ಜ್ಞಾಪನ ಸಂಖ್ಯೆ: ಎಲ್ಎನ್‌ಡಿ/ಆರ್‌ಯುಸಿ/ಸಿಆರ್/12/98-99, ದಿ: 23.11.1998 ರಂತೆ 29 ಜನರಿಗೆ ಮಂಜೂರಾಗಿರುತ್ತದೆ. |
| ಆ) | ಸದರಿ ಸರ್ವೆ ನಂ. ನಲ್ಲಿ ಪೋಡಿಗಾಗಿ ಅರ್ಜಿ ಸಲ್ಲಿಸಿರುವವರ ಸಂಖ್ಯೆ ಎಷ್ಟು; ಯಾವಾಗ ಅರ್ಜಿಸಲ್ಲಿಸಿದ್ದಾರೆ; (ದಿನಾಂಕವಾರು ಮಾಹಿತಿ ನೀಡುವುದು) | ಕಳೆದ 5 ವರ್ಷಗಳಲ್ಲಿ ಸದರಿ ಸ.ನಂ.ನಲ್ಲಿ ಪೋಡಿಗಾಗಿ ಒಟ್ಟು ಮೂರು ಜನರು ಕ್ರಮವಾಗಿ ದಿನಾಂಕ: 05.04.2021, 19.02.2022 ಮತ್ತು 01.08.2022 ರಂದು ಅರ್ಜಿ ಸಲ್ಲಿಸಿರುತ್ತಾರೆ. |
| ಇ) | ಪೋಡಿಗಾಗಿ ಸರ್ಕಾರ "ಸಕಾಲ"ದಲ್ಲಿ ನಿಗಧಿಪಡಿಸಿರುವ ಕಾಲಮಿತಿ ಎಷ್ಟು; ನಿಗಧಿತ ಕಾಲಮಿತಿ ಮುಗಿದರೂ ಪೋಡಿಯಾಗದ ಅರ್ಜಿಗಳ ಸಂಖ್ಯೆ ಎಷ್ಟು; ಸದರಿ ಅರ್ಜಿಗಳು "ಸಕಾಲ" ದಲ್ಲಿ ಇತ್ಯರ್ಥವಾಗದಿರಲು ಕಾರಣವೇನು; | ಸರ್ಕಾರಿ ಜಮೀನಿನ ಪೋಡಿಗಾಗಿ ಸರ್ಕಾರವು ಯಾವುದೇ ಕಾಲಮಿತಿಯನ್ನು ನಿಗದಿಪಡಿಸಿರುವುದಿಲ್ಲ. ಪೋಡಿಗಾಗಿ ಅರ್ಜಿ ಬಂದ ಕೂಡಲೇ ನಿಯಮಾನುಸಾರ ಮೂಲ ಮಂಜೂರಾತಿಯ ದಾಖಲೆಗಳನ್ನು ಪರಿಶೀಲಿಸಿಕೊಂಡು ಕ್ರಮ ಕೈಗೊಳ್ಳಲಾಗುತ್ತಿರುತ್ತದೆ. ಪೋಡಿ ಕಾರ್ಯವು ಮೂಲ ಮಂಜೂರಾತಿ ದಾಖಲೆಗಳನ್ನು ಪರಿಶೀಲಿಸಿಕೊಂಡು, ಅಳತೆಕಾರ್ಯದ ಪ್ರಕ್ರಿಯೆಯಾಗ ಬೇಕಾಗಿರುವುದರಿಂದ ಸಮಯಾವಕಾಶದ ಅವಶ್ಯಕತೆ ಇರುತ್ತದೆ. |
| ಈ) | ಸದರಿ ಸರ್ವೆ ನಂ 130ರಲ್ಲಿನ ಪೋಡಿಗಾಗಿ ಬಂದ ಅರ್ಜಿಗಳನ್ನು ಇತ್ಯರ್ಥಪಡಿಸಲು ಸರ್ಕಾರ ಕೈಗೊಂಡ ಕ್ರಮಗಳೇನು; | ಸದರಿ ಸರ್ವೆ ನಂಬರ್ ಪೋಡಿಗಾಗಿ ಬಂದ ಅರ್ಜಿಗಳಿಗೆ ಸಂಬಂಧಿಸಿದಂತೆ, ಮೂಲ ಮಂಜೂರಾತಿಯ ದಾಖಲೆಗಳನ್ನು ಪರಿಶೀಲಿಸಿಕೊಂಡು ಹಾಗೂ ಪಹಣಿ ಕಾಲಂ 3 ಮತ್ತು 9ನ್ನು ತಾಳೆ ಮಾಡಿ ತಹಶೀಲ್ದಾರ್, ಇವರ ಕಚೇರಿಯಿಂದ ನಮೂನೆ-1 ರಿಂದ 5ನ್ನು ಭರ್ತಿಮಾಡಿ ಮೇಲುಸಹಿಗಾಗಿ ಉಪವಿಭಾಗಾಧಿಕಾರಿಗಳಿಗೆ ಸಲ್ಲಿಸಲಾಗುವುದು. ಮೇಲಾಧಿಕಾರಿಗಳಿಂದ ಮೇಲುಸಹಿಯಾಗಿ ಬಂದ ನಂತರ ಭೂ ದಾಖಲೆಗಳ ಸಹಾಯಕ ನಿರ್ದೇಶಕರು, ನಮೂನೆ-6 ರಿಂದ 10ನ್ನು ತಯಾರಿಸಬೇಕಾಗಿರುತ್ತದೆ. ಪೋಡಿ ಕಾರ್ಯವು ವಿವಿಧ ಹಂತಗಳಲ್ಲಿ ಕ್ರಮ ಕೈಗೊಳ್ಳುವ ಪ್ರಕ್ರಿಯೆಯಾಗಿದ್ದು, ಸಮಯಾವಕಾಶದ ಅವಶ್ಯಕತೆ ಇರುತ್ತದೆ. |
| ಉ) | ಉದ್ದೇಶಪೂರ್ವಕವಾಗಿ ಪೋಡಿ ಮಾಡದೆ ಅರ್ಜಿಗಳನ್ನು ಬಾಕಿಯಿಟ್ಟು ಕೊಂಡಿರುವ ಅಧಿಕಾರಿಗಳ ಮೇಲೆ ಸರ್ಕಾರ ಕೈಗೊಂಡ ಕ್ರಮವೇನು? | ಪೋಡಿಗಾಗಿ ಬಂದ ಅರ್ಜಿಗಳನ್ನು ನಿಯಮಾನುಸಾರ ಪರಿಶೀಲಿಸಿ, ಹಂತ ಹಂತವಾಗಿ ಕ್ರಮ ಕೈಗೊಳ್ಳಲಾಗುತ್ತಿದ್ದು, ಯಾವುದೇ ಅರ್ಜಿಗಳನ್ನು ಉದ್ದೇಶಪೂರ್ವಕವಾಗಿ ಬಾಕಿಯಿಟ್ಟು ಕೊಂಡಿರುವುದಿಲ್ಲ. |

ಸಂಖ್ಯೆ: ಆರ್‌ಡಿ 220 ಎಲ್‌ಜಿಕ್ಯೂ 2022

(ಆರ್.ಅಶೋಕ)
ಕಂದಾಯ ಸಚಿವರು